Reg No B G 155 8—7—72

55th Year of Publication ‘Satyavadi’ daily, Mysore 4

In the State - The First
Golden Jubilee -
Celebrated Paper
★
News, Views, Dharmic
Moral Ethical Matters

ಸತ್ಯವಾದಿ

ರಾಜ್ಯದಲ್ಲಿ ಪ್ರಥಮ
ಸುವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಶಿವಪ್ಪನವರ್ ಸಂಪಾದಕರು ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ತಮಿಳುನಾಡು ಘಟನೆ ಬಗೆ ಪಧಾನರ ತೀವ ಗಮನ.

★ಬೆಳಗಾಂ— 5 ದಿನಗಳಿಂದಾದ ವಿಪರೀತ ಮಳೆಯಿಂದ ಮಲಪ್ರಭಾ ಅಣೆಕಟ್ಟಿನ ಹತ್ತಿರದ 6 ಗ್ರಾಮಗಳು ನೀರಿನಲ್ಲಿ ಮುಳುಗಿವೆ

ಮೈಸೂರು ಸರಕಾರ

ಮೈಸೂರು ಪಿ. ಡಬ್ಲ್ಯು. ಡಿ.

ಕಾಲ ವಿಸ್ತರಣೆ

ವಿಷಯ– ಚಾಮರಾಜನಗರ ತಾಲ್ಲೂಕಿನಲ್ಲಿ ಯಿಡಿಯೂರು ಅಡ್ಡಹಳ್ಳಕ್ಕೆ ಅಡ್ಡಲಾಗಿ ಹೊಸ ಕೆರೆ ನಿರ್ಮಾಣಮಾಡುವುದು (ಉಳಿಕೆ ಕೆಲಸ)

ರೆಫರೆನ್ಸ್–

(1) ಟೆಂಡರ್ ಪ್ರಕಟಣೆ ನಂ. 43/71–72 ತಾ ॥ 22–3–72
(2) ಡಿಟೊ. ನಂ ಡಿಬಿ/ಡಿ1/1643–58 ತಾ ॥ 25–4–72
(3) ಡಿಟೊ. ನಂ. 5/72–73 ತಾ ॥ 22–4–72
(4) ಡಿಟೊ ನಂ. 4438 54 ತಾ ॥ 10–6–72

....

ಖಾಲಿ ಟೆಂಡರ್ ಫಾರಂಗಳನ್ನು ಕೊಡುವುದಕ್ಕೆ ನಿಗದಿಮಾಡಿದ್ದ ಕಾಲಾವಧಿ ಮತ್ತು ಮೇಲ್ಕಂಡ ಕೆಲಸಕ್ಕಾಗಿ ಪೂರ್ಣಗೊಳಿಸಿದ ಟೆಂಡರ್‌ಗಳನ್ನು ಸ್ವೀಕರಿಸಲು ನಿಗದಿಯಾಗಿದ್ದ ತಾ ॥ 23–6–72 ಇದ್ದುದ್ದನ್ನು ಯಥಾಯತವಾಗಿ ತಾ॥ 11–7–72 ಮತ್ತು 12–7–72ರವರೆಗೆ ಪುನಃ ವಿಸ್ತರಿಸಲಾಗಿದೆ.

ಮೇಲ್ಕಂಡ ಪ್ರಕಟಣೆಯಲ್ಲಿ ಸೂಚಿಸಲಾದ ಇತರ ಷರತ್ತುಗಳಲ್ಲಿ ಯಾವ ಬದಲಾವಣೆ ಇಲ್ಲದೆ ಹಾಗೇ ಇವೆ.

ಸಹಿ/–
ಎಕ್ಸಿಕ್ಯುಟಿವ್ ಇಂಜಿನಿಯರ್
ಚಾಮರಾಜನಗರ ವಿಭಾಗ
5512-27 ; 29–6–72

ಹಿತೋಕ್ತಿ

ನೀನು ಮಾಡಬಲ್ಲ ಎಲ್ಲಾ ಒಳ್ಳೆಯದನ್ನೂ ನೀನು ಮಾಡಬಲ್ಲ ಎಲ್ಲಾ ಮಾರ್ಗಗಳಲ್ಲಿಯೂ, ನಿನಗೆ ಸಾಧ್ಯವಾದ ಎಲ್ಲಾ ಸ್ಥಳಗಳಲ್ಲಿಯೂ, ನಿನಗೆ ಸಾಧ್ಯವಾದ ಎಲ್ಲಾ ಕಾಲಗಳಲ್ಲಿಯೂ, ನಿನಗೆ ಸಾಧ್ಯವಾದ ಎಲ್ಲಾ ಜನರಿಗೂ, ನಿನಗೆ ಸಾಧ್ಯವಾದಷ್ಟು ಕಾಲದವರೆವಿಗೂ ಮಾಡು

— ಜೆ. ವೆಸ್ಲಿ

●

ಹೆಗ್ಗಡೆಯವರ ನುಡಿ

ಬೆಂಗಳೂರು— ನ್ಯಾಯೋಂಗದಂತೆ ಕಾಣುವ ಅಧಿಕಾರವುಳ್ಳ ಖಾಯಂ ಆರ್ಥಿಕ ಕಮಿಷನ್ನನ್ನು ಸ್ಥಾಪಿಸಬೇಕೆಂದು ಮಾಜಿ ಆರ್ಥ ಸಚಿವ ಶ್ರೀ ರಾಮಕೃಷ್ಣ ಹೆಗ್ಗಡೆ ವಿಧಾನ ಪರಿಷತ್ತಿನಲ್ಲಿ ಕೇಳಿಕೆ ಹಾಕಿದರು – ಹಿಂದಿನ ಎರಡು ಮಂತ್ರಿಮಂಡಲಗಳಲ್ಲಿಯ ಆಪಾದಿಸಲಾಗಿರುವ ಲೋಪದೋಷ ಬಗ್ಗೆ ನ್ಯಾಯಾಂಗ ತನಿಖೆ ನಡೆಯಲೆಂದು ಹೇಳಿದರು.

★

ಶಾಸಕರಿಗೆ ವಿಶೇಷ ಭತ್ಯೆ

ಬೆಂಗಳೂರು— ಪಾರ್ಟಿ ನಾಯಕರಾದ ಮುಖ್ಯಮಂತ್ರಿ ಶ್ರೀ ದೇವರಾಜಅರಸಿನವರ ಅಧ್ಯಕ್ಷತೆಯಲ್ಲಿ ನಡೆದ ಶಾಸನಸಭಾ ಕಾಂಗ್ರೆಸ್ ಪಾರ್ಟಿ ಕಾರ್ಯಕಾರಿ ಸಮಿತಿಯಲ್ಲಿ ಎಲ್ಲ ಶಾಸಕರಿಗೂ, ಅಂಚೆ, ಟೆಲಿಫೋನ್, ತಂತಿ, ಟೈಪುಪೂಡುವುದು ಮುಂತಾದ ಖರ್ಚಿಗಾಗಿ ವಿಶೇಷ ಅಲೋಯನ್ಸು ತಿಂಗಳಿಗೆ ರೂ 200 ಕೊಡುವಂತೆ ಶಿಫಾರಸು ಮಾಡಲಾಯಿತು – ಈಗ ಶಾಸಕರಿಗೆ ತಿಂಗಳಿಗೆ ರೂ. 250 ಸಂಬಳ ಮತ್ತು ರೂ 150 ಪ್ರಯಾಣ ಭತ್ಯೆ ಕೊಡಲಾಗುತ್ತಿದೆ ; ಇದರ ಜೊತೆಗೆ ಸಭಾಧಿವೇಶನ ಕಾಲದಲ್ಲಿ ಉಚಿತ ವಸತಿ ಮತ್ತು ಪೋಸ್ಟ್ ಸೌಲಭ್ಯ ಅಧಿವೇಶ ಭತ್ಯದಿನಕ್ಕೆ ರೂ 25 ಇದೆ ; ಸರಕಾರಿ ಬಸ್‌ಗಳಲ್ಲಿ ಫ್ರೀ ಪ್ಯಾಸು ಇದೆ.

ಶರಾವತಿ ಕರ್ಮಕಾಂಡ

ಬೆಂಗಳೂರು— ಶರಾವತಿ ಕರ್ಮಕಾಂಡದ ಬಗ್ಗೆ ನ್ಯಾಯಾಂಗ ತನಿಖೆ ವಿಷಯವೆನ್ನು ತಾವು ರಾಕ್ಷಸಾಕಾರ ಹೈಡೆಲ್ ಪರ್ಸ್ಪಗೆ ಭೇಟಿ ಇತ್ತನಂತರ, ಪರ್ಯಾಲೋಚಿಸುವುದಾಗಿ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್‌ರವರು ಶಾಸನ ಸಭೆಯಲ್ಲಿ ತಿಳಿಸಿದರು.

●

ತಮಿಳುನಾಡು ಗಂಡಾಂತರದಲ್ಲಿ

ನವದೆಹಲಿ— ಪ್ರಧಾನಿ ಇಂದಿರಾರವರು ತಮಿಳುನಾಡುವಿನ ಭೀಕರ ಪರಿಸ್ಥಿತಿ ಕ್ಕಡೆ ತೀವ್ರ ಗಮನ ಕೊಟ್ಟಿದ್ದು, ಆ ಬಗ್ಗೆ ತಕ್ಷಣ ಕ್ರಮ ಕೈಗೊಳ್ಳುವ ಸಂಭವವಿಡೆ ಎಂದು ಹೇಳಲಾಗುತ್ತಿದೆ - ನಿನ್ನೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯಲ್ಲಿ ಈ ವಿಚಾರದಲ್ಲಿ 90 ನಿಮಿಷ ಚರ್ಚೆ ನಡೆಯಿತು.

○

ರಾಜ್ಯದಲ್ಲಿ ಭೂಪರಿಮಿತಿ

ಬೆಂಗಳೂರು — ಭೂಸುಧಾರಣೆಗೆ ಸಂಬಂಧಿಸಿದ ಕಾಂಗ್ರೆಸ್ ಸಮಿತಿ ಶಿಫಾರಿಸಿನಂತೆ, ಮಂತ್ರಿಮಂಡಲ ರಾಜ್ಯದಲ್ಲಿ 10–18 ಎಕ್ರೆ ಪರಿಮಿತಿಗೆ ಒಪ್ಪಿದೆ.

★

ಕತ್ತೆಗಳ ಬಂಧನ

ಕೋಲಾರ— ಸಾರ್ವಜನಿಕ ರಸ್ತೆಗಳಲ್ಲಿ ಸುತ್ತಾಡುತ್ತಿದ್ದ 43 ಕತ್ತೆಗಳನ್ನು ಪೋಲೀಸರು ಬಂಧಿಸಿ, ಪೋಲೀಸು ಸ್ಟೇಷನ್ ಪಕ್ಕದಲ್ಲಿ ಬೈಲು ಜೈಲಿನಲ್ಲಿಟ್ಟಿರುವರು – ಅವುಗಳನ್ನು ಪಡೆಯಲು ಇನ್ನೂ ಯಾರೂ ಬಂದಿಲ್ಲ.

★

ಆಕ್ಸಿ ವಶ

ಮೈಸೂರು– ಜಗನ್ಮೋಹನ ಅರಮನೆ ಬೀದಿಯ ಒಬ್ಬ ಒಟ್ಟಾರೆ ವ್ಯಾಪಾರಿಯಿಂದ ರೂ 24000 ಬೆಲೆಯ 164 ಚೀಲ ಅಕ್ಕಿ ವಶಪಡಿಸಿಕೊಳ್ಳಲಾಯಿತು.

ಶವಗಳೊಂದಿಗೆ ಭಾರಿ ಮೆರವಣಿಗೆ

ಕೊಯಮುತ್ತೂರು— ವಿದ್ಯಾರ್ಥಿಗಳು, ಗಿರಣಿ ಕಾರ್ಮಿಕರು, ರೈತರು ಹರತಾಳದಲ್ಲಿದ್ದ ಈ ನಗರದಲ್ಲಿ ಅಯ್ಯಂಪಾಳ್ಯಂನಲ್ಲಿ ಪೋಲೀಸು ಗೋಳೀಬಾರಿನಿಂದ ಮರಣ ಹೊಂದಿದೆ ಇಬ್ಬರ ಶವಗಳೊಡನೆ ಗುರುವಾರ ಭಾರಿ ಮೆರವಣಿಗೆ ನಡೆಸಲಾಯಿತು ಪರಿಸ್ಥಿತಿ ತೀವ್ರ ಉತ್ಕಟತೆಯಲ್ಲಿದ್ದುದರಿಂದ ಇಲ್ಲಿಗೆ ಮದ್ರಾಸಿನಿಂದ ಸೈನ್ಯ ಕಳುಹಿಸಲಾಗಿತ್ತು – ಆದರೆ ಏನೂ ಅನನುಕೂಲ ಘಟನೆಗಳು ನಡೆಯಲಿಲ್ಲ – ಕೊಯಮತ್ತೂರು ಜಿಲ್ಲೆಯ ಸ್ಕೂಲು ಕಾಲೇಜುಗಳು ಸೋಮವಾರದವರೆಗೆ ಮುಚ್ಚಲಾಗಿದೆ – ಮೆರವಣಿಗೆಯಲ್ಲಿ ಶವದ ಜೊತೆ ಸ್ಪೆಶಹೊರೆ ಗ್ರಾಮಗಳ ರೈತರು ಅನೇಕಾನೇಕ ಬಸ್ಸು ಲಾರಿ ಮತ್ತು ಟ್ರಾಕ್ಟರುಗಳೊಡನೆ ಇದ್ದರು

★

ಕಾರ್ಪೊರೇಷನ್‌ಗೆ ಲೇಔಟುಗಳು

ಬೆಂಗಳೂರು— ಟ್ರಸ್ಟ್‌ಬೋರ್ಡು ಸೈಟು ಕೊಡುವಬಗ್ಗೆ ತಯಾರಿಸಲಾಗುತ್ತಿರುವ ನಿಯಮಗಳಲ್ಲಿ ಆವಶ್ಯಕತೆಮೂಲವೂ ಪರಿಗಣಿಸಲಾಗುವುದು ಎಂದು ಶಾಸನಸಭೆಯಲ್ಲಿ ಪೌರಾಡಳಿತ ಮಂತ್ರಿ ಶ್ರೀ ಬಸವಲಿಂಗಪ್ಪನವರು ಹೇಳಿದರು – ಟ್ರಸ್ಟ್ ಬೋರ್ಡಿನಿಂದ ಕಾರ್ಪೊರೇಷನ್‌ಗೆ 7 ಲೇಔಟುಗಳನ್ನು ವರ್ಗಾಯಿಸಲಾಗಿದೆಎಂದೂ ತಿಳಿಸಿದರು

★

ಪುಣಗಿನ ಸಾರಂಗ

ಜಮ್ಮು ಕಾಶ್ಮೀರದ ಆರಣ್ಯಗಳಲ್ಲಿ ಪುಣಗಿನ ಸಾರಂಗಗಳ ಸಂರಕ್ಷಿತ ಏರ್ಪಡಿಸಲಾಗಿದೆ – ಪುಣಗಿನ ಬೆಲೆ ಕೆಜೊಗ್ರಾಂಗೆ ಸುಮಾರು ರೂ. 80000 ಆಗುವುದು !

★ ಮೈಸೂರು— ಮಿಷನ್ ಆಸ್ಪತ್ರೆ ನೌಕರರು ತಮ್ಮ ಕೇಳಿಕೆಗಳ ಒತ್ತಾಯಕ್ಕಾಗಿ ತಾ। 12 ರಿಂದ ಮುಷ್ಕರಹೂಡಲು ನಿರ್ಧರಿಸಿರುವರು.

[ಶ್ರೀ ವೆಂಕಟೇಶ್ವರ ಸ್ವಾಮಿಗೆ ವಜ್ರಖಚಿತ ಕಟಿ ಹಸ್ತ

ತಿರುಪತಿ— ಶ್ರೀ ವೆಂಕಟೇಶ್ವರ ಸ್ವಾಮಿಗೆ ವಜ್ರಖಚಿತ ಕಟಿಹಸ್ತವನ್ನು ಶುಕ್ರವಾರ ತಿರುಮಂಜನಾನಂತರ ಅಲಂಕರಿಸಲಾಯಿತು – ಭಂಗಾರದಲ್ಲಿ ತಯಾರಿಸಲಾಗಿರುವ ರೂ 12 ಲಕ್ಷ ಮೌಲ್ಯದ ಇದರಲ್ಲಿ 500 ಕ್ಯಾರೆಟ್ ವಜ್ರಗಳು ಖಚಿತವಾಗಿವೆ.

ಭೂ ಪರಿಮಿತಿ

ನವದೆಹಲಿ— ಭೂಸುಧಾರಣೆಬಗ್ಗೆ ಕಾಂಗ್ರೆಸ್ಸು ಸಮಿತಿಯು ಸಂಸಾರಕ್ಕೆ 2 ಬೆಳೆ ಇರುವ ಕಡೆ 10 ರಿಂದ 18 ಎಕ್ರೆ ಪರಿಮಿತಿಯನ್ನೂ, ಒಂದು ಬೆಳೆ ಇರುವ ಕಡೆ ಮತ್ತು ಹೊಲಕ್ಕೆ 27 ಎಕ್ರೆ ಪರಿಮಿತಿಯನ್ನೂ ಸಲಹೆ ಮಾಡಿದೆ.

ಮಠಾಧೀಶರ ಸ್ತುತ್ಯಕಾರ್ಯ

ಹೊಸಪೇಟೆ— ತಮ್ಮ ಭಕ್ತರ ಮನೆಗಳಿಗೆ ಭೇಟಿ ಕೊಟ್ಟು ಪವಿತ್ರ ಧರ್ಮ ಸತ್ಯಗಳನ್ನು ಬೋಧಿಸಲು ಕೊಟ್ಟೂರು ಸ್ವಾಮಿ ಮಠದ ಶ್ರೀ ಸಂಗನಬಸವಸ್ವಾಮಿಗಳು ತಾ ॥ 1 ರಿಂದ ಪಾದಯಾತ್ರೆ ಪ್ರಾರಂಭಿಸಿರುವರು.

ನಿಕ್ಸನ್ನರ ಕೊಲೆ ಬೆದರಿಕೆ

ನ್ಯೂಯಾರ್ಕ್— ಬ್ರುಕ್ಲಿನ್ನಿನ 19 ವರ್ಷದ ಅಡ್ರೆ ಸ್ಟೀವನ್ಸ್ ಪೋಲೀಸು ಕೇಂದ್ರಕ್ಕೆ " ನಾನು ಅಧ್ಯಕ್ಷ ನಿಕ್ಸನ್ನರನ್ನು ಕೊಲ್ಲುತ್ತೇನೆ ಮತ್ತು ತಡೆಯಲು ಬರುವ ಪೋಲೀಸರನ್ನೂ ಕೊಲ್ಲುತ್ತೇನೆ ಎಂದು ಫೋನ್ ಮಾಡಿದನು.

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠ ವೆನ್ನುವುದು ಸೊಕ್ಕಿನ 'ಕಲ್ಪನೆ' ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯದ ಧರ್ಮಕರ್ತ
— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ಚವರ ಚೊಚ್ಚಲು ಚಿತ್ರ

ಅ ನೆ - ಹು ಡು ಗ

S H A K T I

S U D H A

A Superb Tonic

Quality Printing Neat Binding

Lakshminarasimha Press

Sivarampet, Mysore

ವುಡ್‌ಲ್ಯಾಂಡ್ 7-7-72ರಿಂದ ಆಮೋಘ 10ನೇವಾರ

.... ಚಿತ್ತಾಕರ್ಷಕ ಕನ್ನಡ ಚಿತ್ರ ....

ಹೃದಯ ಸಂಗಮ

ನಟಸಾರ್ವಭೌಮ ರಾಜಕುಮಾರ್, ಭಾರತಿ, ಬಾಲಕೃಷ್ಣ, ಅಶ್ವತ್ಥ್, ಪಂಡರಿಬಾಯಿ
ನಿರ್ದೇಶನ : ರಾಜಶ್ರೀ ಸಹೋದರರು ನಿರ್ಮಾಪಕರು : ಎಂ ಜಿ ಎಂ ಸಹೋದರರು

ಪ್ರತಿ ದಿನ 3 ಪ್ರದರ್ಶನಗಳು

ಬೆಳಗಿನ ಪ್ರದರ್ಶನ ಪ್ರತಿ ದಿನ 10-30 ಬಾಗ್ದಾದ್ ತಿರುಗ್ದ

ಅಪೂರ್ವ 7 7 72 ರಿಂದ

.... ಮನಮೋಹಕ ತೆಲುಗು ಚಿತ್ರ ....

ಹಂತಕಲು ದೇವಾಂತಕಲು

ತಾರಾಗಣ— ಕೃಷ್ಣ, ನಾಗೇಶ್, ರಾಜ ಸುಲೋಚನ, ಮುಕ್ಕಾಮಲು, ನಿರ್ಮಲ

ದಿನ 3 ಪ್ರದರ್ಶನಗಳು

Contribute Liberally
to the National Defence Fund



Help The Gorakshana

— Humanitarian Propoganda Monthly ....

Protect the Cow

Edited Printedand Published by Dharmapracharanirata
M S Krishna Rao (Propretor) at the Satvavadi Press
Chamarajapuram Mysore 4